**ಪ್ರಮಾಣೀಕರಿಸಲಾದ ದಿನಾಂಕ: 20.01.2025.**

**<u>ಪಾಟೀ ಸವಾಲು : ವಾದಿ ಪರ ಶ್ರೀ. N.K ವಕೀಲರಿಂದ</u> :**

ನಾನು 7ನೇ ತರಗತಿಯವರೆಗೂ ಓದಿದ್ದೇನೆ. ಕನ್ನಡ ಮಾತ್ರ ಗೊತ್ತಿದ್ದು, ಇಂಗ್ಲೀಷ್ ಗೊತ್ತಿಲ್ಲ. ದಾವೆ ದಾಖಲೆಗಳ ಬಗ್ಗೆ ಗೊತ್ತು. ಎಕರೆಗೆ ಎಷ್ಟು ಗಜ ಬರುತ್ತದೆ ಗೊತ್ತಿಲ್ಲ. ನಿಡಿ.9, 10 & 11 ಕ್ರಯಪತ್ರದಲ್ಲಿರುವ ವಿಸ್ತೀರ್ಣದ ಜಮೀನು ನಿಪಿ.27 ಎಂ.ಆರ್ ದಾಖಲೆಯಲ್ಲಿ ಈ ದಾಖಲೆಯಂತೆ ತಾಳೆ ಇಲ್ಲ ಎಂದು ಷರಾ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ.9 ರಿಂದ 11 ದಾಖಲೆಗಳಂತೆ ನನ್ನ ತಂದೆಯ ಹೆಸರಿಗೆ ಯಾವುದೇ ಕಂದಾಯ ದಾಖಲೆಗಳು ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಕುಟುಂಬ ಬೆಂಗಳೂರು ವಾಸ ಇರುವುದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಕ್ರಯಪತ್ರಗಳನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.14 ಜೀವನಾಂಶದ ಪತ್ರ ಬರೆದುಕೊಡಲು ನನ್ನ ತಂದೆಗೆ ಯಾವುದೇ ಹಕ್ಕು, ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ.14

ದಾಖಲೆಯಲ್ಲಿರುವ ಆಸ್ತಿಗೆ ಯಾವುದೇ ಕಂದಾಯ ದಾಖಲೆ ಇಲ್ಲ ಎಂದು ನನಗೆ ಗೊತ್ತಿಲ್ಲ. ನಿಡಿ.14 ದಾಖಲೆ ಕೂಡ ಸೃಷ್ಟಿಸಿಕೊಂಡಿರುವ ದಾಖಲೆ ಕಾನೂನು ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ನಿಡಿ.16 ನಮ್ಮ ವಿಭಾಗ ಪತ್ರದಲ್ಲಿ ದಾವಾ ಸರ್ವೆನಂಬರ್ ನಮೂದಾಗಿಲ್ಲ ಎಂದರೆ ನನ್ನ ತಂದೆ ಖರೀದಿಸುವಾಗಲೇ ಅದು ಪುರಸಭೆಗೆ ಸೇರಿತ್ತು. ನನ್ನ ತಂದೆ ಖರೀದಿಸಿದ ಪತ್ರಗಳ ಆಧಾರ ಪುರಸಭೆಯಲ್ಲಿ ಹೆಸರು ನೋಂದಣಿಯಾದ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ. ಕಡತದಲ್ಲಿ ಅಂತಹ ಪುರಸಭೆಯ ದಾಖಲೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಒಂದು ಪತ್ರ ಮಾಡಿಕೊಳ್ಳುವ ಕಾರಣಕ್ಕೆ ಮತ್ತು ದಾವಾ ಸ್ವತ್ತುಗಳಲ್ಲಿ ಅಕ್ರಮವಾಗಿ ವಾಸ ಮಾಡುತ್ತಿರುವುದನ್ನು ಪ್ರಶ್ನಿಸಬಾರದೆಂಬ ಉದ್ದೇಶಕ್ಕೆ ನಾನು ಮತ್ತು 3ನೇ ಪ್ರತಿವಾದಿ ನಿಡಿ.16 ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸುಮಾರು ವರ್ಷಗಳಿಂದ ಸ್ವಾಧೀನದಲ್ಲಿದ್ದು ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುತ್ತೇವೆ. ನನ್ನ ತಂದೆ ಖರೀದಿಸಿದ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತೇವೆ. ನಿಪಿ.26 ರಲ್ಲಿ ನನ್ನ ಮನೆ ಇದೆ. ಆ ಮನೆಯ ಪಕ್ಕ ಕಾಣಿಸುತ್ತಿರುವ ಅಡಿಪಾಯ ನನ್ನ ತಂಗಿಯ ಜಾಗ ಎಂದರೆ ಸರಿಯಲ್ಲ. ನಿಪಿ.26 ಅಡಿಪಾಯದಲ್ಲಿ ಈಗ 3ನೇ ಪ್ರತಿವಾದಿ ಮನೆ ಕಟ್ಟಿರುವುದಿಲ್ಲ, ನನ್ನ ಮನೆಯ ಒಂದು ನಿವೇಶನ ಬಿಟ್ಟು ಪಕ್ಕದಲ್ಲೇ 10 ವರ್ಷಗಳ ಹಿಂದೆ ಕಟ್ಟಿಕೊಂಡಿರುತ್ತಾರೆ. ಅಕ್ರಮವಾಗಿ ನಿಪಿ.26 ರಲ್ಲಿ ಕಾಣುತ್ತಿರುವ ನನ್ನ ಮನೆ ಮತ್ತು ಆ ಅಡಿಪಾಯ ಹಾಕಿ ಈಗ ಪೂರ್ಣಗೊಂಡಿರುವ ಮನೆಯಲ್ಲಿ ನಾನು ಮತ್ತು 3ನೇ ಪ್ರತಿವಾದಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರೇ ಖುದ್ದು ಹಾಜರುಪಡಿಸಿದ್ದು ನಿಶಾನೆಯಾಗದಂತಹ ಫೋಟೊದಲ್ಲಿ ಆತನ ಮನೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.31 ಎಂದು ಗುರುತಿಸಲಾಯಿತು. ಈಗ ಗುರುತಿಸಿರುವ ಮನೆ ಅಂಬೇಡ್ಕರ್ ನಗರದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.31 ರಲ್ಲಿ ಕಾಣುತ್ತಿರುವ ರಸ್ತೆ 3ನೇ ಅಡ್ಡರಸ್ತೆಯಿಂದ ಗುರುತಿಸಿರುವ ಮನೆಗೆ ಹೋಗಲು ದಾರಿ ಇಲ್ಲ ಎಂದರೆ ಸರಿಯಲ್ಲ, ಗಲ್ಲಿ ಇದ್ದು ಆ ಗಲ್ಲಿಯಿಂದ ಹೋಗುತ್ತೇವೆ. ಈಗ ಗುರುತಿಸಿರುವ ಮನೆಯ ದಕ್ಷಿಣಕ್ಕೆ ಅಂಬೇಡ್ಕರ್ ನಗರ ಇರುತ್ತದೆ. ನಿಡಿ.16 ವಿಭಾಗಪತ್ರದಲ್ಲಿ ಗುರುತಿಸಿರುವ ಮನೆಯ ದಕ್ಷಿಣಕ್ಕೆ ನಮ್ಮ ಹಿಸ್ಸಾದಾರರ ರಸ್ತೆ ಎಂದು ಇದ್ದು, ಅಂಬೇಡ್ಕರ್ ನಗರ ಇರುವುದಿಲ್ಲ ಎಂದರೆ 3ನೇ ಅಡ್ಡರಸ್ತೆ ಇರುತ್ತದೆ. ಈ ಮನೆ ದಾವಾ ಸ್ವತ್ತಿನಲ್ಲಿದ್ದು ಅಂಬೇಡ್ಕರ್ ನಗರದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಆ ಭಾಗವನ್ನು ಹೊಡೆದುಕೊಳ್ಳಲು ನನ್ನ ಮತ್ತು ನನ್ನ ತಂಗಿಯ ಮೇಲೆ ಹೇಳಿದ ಸ್ಥಳ ಅಂಬೇಡ್ಕರ್ ನಗರದಲ್ಲಿ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.31 ರಲ್ಲಿ ಗುರುತಿಸಿರುವ ಮನೆ ಪಶ್ಚಿಮ ದಿಕ್ಕಿನ ಜಾಗದಲ್ಲೇ ನನ್ನ ತಂಗಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.31 ರಲ್ಲಿ ನನ್ನ ತಂಗಿಯ ಮನೆ ಕಾಣುತ್ತಿಲ್ಲ. ನಿಡಿ.7 ಫೋಟೊದಲ್ಲಿ 3ನೇ ಪ್ರತಿವಾದಿಯ ಮನೆ ಗುರುತಿಸಿರುತ್ತಾರೆ. ಈಗ ನಾನು ತೋರಿಸಿರುವ ಜಾಗ ಮನೆ ಆಗಿರುವುದಿಲ್ಲ, ಕಟ್ಟಡದ ಅಡಿಪಾಯ ಆಗಿರುತ್ತದೆ ಎಂದರೆ ಸರಿಯಲ್ಲ. ನಿಡಿ.7 ಫೋಟೊದಲ್ಲಿ ನನ್ನ ಸಾಕ್ಷ್ಯ ಕೊಡುವಾಗ ಕೆಂಪು ಪೆನ್ನಿನಿಂದ ಗುರುತಿಸಿರುವ ಮನೆಗಳಲ್ಲಿ ನಮ್ಮ ಕುಟುಂಬ ವಾಸಿಸುತ್ತಿದೆ ಎಂದು ಹೇಳಿದ್ದು, ಆ ರೀತಿ ನಮ್ಮ ಸ್ವಾಧೀನದಲ್ಲಿ ಯಾವುದೂ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಜಮೀನು ನಮ್ಮ ಮನೆಗಳಿರುವ ಸ್ಥಳದಲ್ಲಿ ಇಲ್ಲದಿರುವುದರಿಂದ ತಹಶೀಲ್ದಾರ್ ಕಡೆಯಿಂದ ಅಳತೆಗೆ ಒಪ್ಪುವುದಿಲ್ಲ. ನನ್ನ ತಂದೆ ಕ್ರಯಪತ್ರ ದಾಖಲೆಗಳು ಕಾನೂನು ರೀತಿಯಲ್ಲಿ ಊರ್ಜಿತವಲ್ಲ, ಆದ್ದರಿಂದ

ದಾವಾ ಸ್ವತ್ತಿನಲ್ಲಿ ಇರುವ ನಮ್ಮ ಮನೆಗಳನ್ನು ಅಂಬೇಡ್ಕರ್ ನಗರದಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ವಾದಿಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ, 50 ವರ್ಷಗಳ ಮೇಲ್ಪಟ್ಟಿನಿಂದ ನಾವು ಅಲ್ಲಿದ್ದು ವಾದಿ ಎಂದೂ ನಮ್ಮ ಸ್ವಾಧೀನವನ್ನು ಪ್ರಶ್ನಿಸಿರುವುದಿಲ್ಲ. ನಾವುಗಳು ವಾದಿಯನ್ನು ಸ್ಥಳಕ್ಕೆ ಬರಲು ಬಿಡುತ್ತಿಲ್ಲ ಮತ್ತು ಒಂದು ಫೋಟೊ ತೆಗೆಯಲು ಬಿಡುತ್ತಿಲ್ಲ ಎಂದರೆ ಸರಿಯಲ್ಲ. ಒಂದು ವಾರದ ಹಿಂದೆ ವಾದಿಯ ಸ್ನೇಹಿತರು ದಾವಾ ಸ್ವತ್ತಿನ ಬಳಿ ಬಂದಾಗ ನನ್ನ ಅಣ್ಣ ಮಲ್ಲಿಕಾರ್ಜುನಯ್ಯ ಕಾರಣವಿಲ್ಲದೇ ಪೊಲೀಸ್ ಠಾಣೆಗೆ ಸುಳ್ಳು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.17 ರಿಂದ 31 ಮತ್ತು ನಿಪಿ.21 ದಾಖಲೆಗಳನ್ನು ಪುರಸಭೆಯವರ ಜೊತೆ ಷರೀಕಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯದ್ದು ಆದ್ದರಿಂದ ನನ್ನ ಸ್ವಾಧೀನ ಅಕ್ರಮವಾಗಿದ್ದು ಅಲ್ಲೂ ಮುಂದುವರೆಸಲು ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ.**